# ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಸ್ಪೆಷಲ್ ಕೇಸ್** (ಎಸ್.ಸಿ./ಎಸ್.ಟಿ.) **ನಂ. 29/2024**

**ಪಿರ್ಯಾದಿ** – ಸರ್ಕಾರದ ಪರವಾಗಿ **ಹಿರಿಯೂರು ಗ್ರಾಮಾಂತರ ಪೊಲೀಸರು.**

**– ವಿರುದ್ಧ –**

**ಆರೋಪಿ** – **1) ಬಾಲ ರಾಮಯ್ಯ ಬಿನ್ ಅಪ್ಪಣ್ಣ,**
ವಯಸ್ಸು: 50 ವರ್ಷ, ವ್ಯವಸಾಯ,
**2) ಅಜ್ಜಯ್ಯ ಬಿನ್ ಕರಿಯಣ್ಣ,**
ವಯಸ್ಸು: 42 ವರ್ಷ, ಖಾಸಗಿ ಕೆಲಸ,
**3) ಸಿದ್ಧ ರಮೇಶ ಬಿನ್ ನರೇಂದ್ರಪ್ಪ,**
ವಯಸ್ಸು: 22 ವರ್ಷ, ವ್ಯವಸಾಯ
**4) ರಾಮಚಂದ್ರಪ್ಪ ಬಿನ್ ವೀರಣ್ಣ,**
ವಯಸ್ಸು: 58 ವರ್ಷ, ವ್ಯವಸಾಯ
ಎಲ್ಲರೂ ವಾಸ: ಆಲೂರು ಗ್ರಾಮ, ಹಿರಿಯೂರು ತಾಲೂಕ, ಚಿತ್ರದುರ್ಗ ಜಿಲ್ಲೆ

## —:: ದೋಷಾರೋಪಣೆ ::—

***ಶ್ರೀ ಗಂಗಾಧರ ಚನ್ನಬಸಪ್ಪ ಹಡಪದ**, **ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,** ಚಿತ್ರದುರ್ಗ* ಆದ ನಾನು

**ಆರೋಪಿಗಳಾದ** ನಿಮ್ಮನ್ನು ಈ ಕೆಳಕಂಡ ಆರೋಪಣೆಗೆ ಒಳಪಡಿಸುತ್ತೇನೆ.

ದಿನಾಂಕ 29.6.2024 ರಂದು ಬೆಳಿಗ್ಗೆ 11.50 ಗಂಟೆ ಸಮಯದಲ್ಲಿ ಆರೋಪಿಗಳಾದ ನೀವು ನಿಮ್ಮ ಸಮಾನವಾದ ಉದ್ದೇಶದಿಂದ ಹಿರಿಯೂರು ತಾಲೂಕ ಹೊಸಯಳನಾಡು ಗ್ರಾಮ ಪಂಚಾಯತಿ ಕಚೇರಿಗೆ ಬಂದು "ನಮ್ಮ ಗ್ರಾಮದಲ್ಲಿ ನೀರು ಸರಬರಾಜು ಇಲ್ಲ" ಎಂದು ಚಾಸಾ:1 ವಿವೇಕ ತೇಜಸ್ವಿ ಅವರಿಗೆ ಕಚೇರಿಯಿಂದ ಹೊರಗೆ ಎಳೆದು ಅವರ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ 353 ಸಹವಾಚಕ ಕಲಂ 34** ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನವಾದ ಉದ್ದೇಶದಿಂದ ಚಾಸಾ:1 ವಿವೇಕ ತೇಜಸ್ವಿ ಅವರಿಗೆ "ಮಾದಿಗ ಜಾತಿಯ ಕೀಳು ಜಾತಿಯವನೇ" ಎಂದು ಜಾತಿ ಹಿಡಿದು ಬೈದಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ಮತ್ತು ಎಸ್‌ಸಿ/ಎಸ್‌ಟಿ ದೌಜನ್ಯ ತಡೆ ಕಾಯಿದೆ 3(2)(ಆರ್)(ಎಸ್) ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನವಾದ ಉದ್ದೇಶದಿಂದ ಚಾಸಾ:1 ವಿವೇಕ ತೇಜಸ್ವಿ ಅವರಿಗೆ ಕೈ ಕಾಲುಗಳಿಂದ ಹೊಡೆದಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ 323 ಸಹವಾಚಕ ಕಲಂ 34** ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನವಾದ ಉದ್ದೇಶದಿಂದ ಚಾಸಾ:1 ವಿವೇಕ ತೇಜಸ್ವಿ ಅವರಿಗೆ "ನಿನ್ನನ್ನು ಕರ್ತವ್ಯ ಮಾಡಲು ಬಿಡುವುದಿಲ್ಲ" ಎಂದು ಪ್ರಾಣ ಬೆದರಿಕೆ ಹಾಕಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ 506 ಸಹವಾಚಕ ಕಲಂ 34** ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನವಾದ ಉದ್ದೇಶದಿಂದ ಚಾಸಾ:1 ವಿವೇಕ ತೇಜಸ್ವಿ ಅವರು ಪರಿಶಿಷ್ಟ ಜಾತಿಗೆ ಸೇರಿದವರು ಎಂದು ಗೊತ್ತಿದ್ದೂ, ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಎಸ್‌ಸಿ/ಎಸ್‌ಟಿ ದೌಜನ್ಯ ತಡೆ ಕಾಯಿದೆ 3(1)(m) ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನವಾದ ಉದ್ದೇಶದಿಂದ ಚಾಸಾ:1 ವಿವೇಕ ತೇಜಸ್ವಿ ಅವರು ಪರಿಶಿಷ್ಟ ಜಾತಿಗೆ ಸೇರಿದವರು ಎಂದು ಗೊತ್ತಿದ್ದೂ, ಅವರ ಮೇಲೆ ಹೇಳಿದ ಅಪರಾಧಿಕ ಕೃತ್ಯಗಳನ್ನು ಎಸಗಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಎಸ್‌ಸಿ/ಎಸ್‌ಟಿ ದೌಜನ್ಯ ತಡೆ ಕಾಯಿದೆ 3(2)(V-a) ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಈ ಮೇಲಿನ ಆಪಾದನೆಗಳಿಗೆ ನಿಮ್ಮ ಮೇಲೆ ವಿಚಾರಣೆ ನಡೆಸಲಾಗುವುದು.

**(ಗಂಗಾಧರ ಚನ್ನಬಸಪ್ಪ ಹಡಪದ)**
ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಚಿತ್ರದುರ್ಗ.